## ರಂಜನೆ ಪ್ರಬೋಧನೆಯ 'ವೆನಿಲ್ಲಾ'

ಜಯತೀರ್ಥ ನಿರ್ದೇಶನದ 'ವೆನಿಲ್ಲಾ' ತೆರೆಕಾಣಲು ತುರುಸಿನ ಸಿದ್ಧತೆ ನಡೆಸುತ್ತಿದೆ. ಜಯತೀರ್ಥ ಎಂದಮೇಲೆ ಪ್ರಯೋಗಶೀಲತೆಯ ಹಂಬಲ ಇರಲೇಬೇಕು. ಅವರ ಹಿಂದಿನ ನಾಲ್ಕೂ ಚಿತ್ರಗಳು ಬೇರೆ ಬೇರೆ ಕಾರಣಗಳಿಗಾಗಿ ಸುದ್ದಿ ಮಾಡಿದ್ದವು. ಆದರೆ, ಎಲ್ಲ ಚಿತ್ರಗಳಲ್ಲಿನ ಸಾಮಾನ್ಯ ಅಂಶ ರಂಜನೆ ಹಾಗೂ ಪ್ರಬೋಧನೆ. ಬೋಧನೆಯ ಗೊಡವೆಗೆ ಹೋಗದೆ ಪ್ರೇಕ್ಷಕರಿಗೆ ಚಿಂತನೆಯ ಸ್ವಾತಂತ್ರ್ಯವನ್ನು ನೀಡುವುದು ಅವರ ಸಿನಿಮಾಗಳ ವಿಶೇಷ.

'ವೆನಿಲ್ಲಾ' ಕೂಡ ಜಯತೀರ್ಥರ ಹಿಂದಿನ ಸಿನಿಮಾಗಳಂತೆಯೇ ಹೊಸತನದ ಹಂಬಲದ ಸಿನಿಮಾ. ಹೊಸತನ ಎನ್ನುವುದು ಕಥೆಯ ಮಟ್ಟಿಗೂ ಹೌದು, ಪ್ರತಿಭೆಗಳನ್ನು ಪರಿಚಯಿಸುವ ವಿಷಯದಲ್ಲಿಯೂ ಹೌದು. ಯುವ ಮನಸ್ಸುಗಳ ಬದುಕಿನ ಹುಡುಕಾಟದ ಈ ಕಥನ, ರಂಜನೆರೋಚಕತೆಯನ್ನು ಹದವಾದ ಪ್ರಮಾಣದಲ್ಲಿ ಒಳಗೊಂಡಿದೆಯಂತೆ.

ಅವಿನಾಶ್ ಹಾಗೂ ಸ್ವಾತಿ ಚಿತ್ರದ ನಾಯಕನಾಯಕಿ. ಅವಿನಾಶ್ ಅವರಿಗಿದು ಚೊಚ್ಚಲ ಸಿನಿಮಾ. ಮಂಡ್ಯ ರಮೇಶ್ ಗರಡಿಯಲ್ಲಿ ರಂಗಭೂಮಿಯ ತಾಲೀಮು ನಡೆಸಿರುವ ಅವರು, ಈಗ ಬೆಳ್ಳಿತೆರೆಯ ಪ್ರಭೆಗೆ ನಾಯಕನ ರೂಪದಲ್ಲಿ ತಮ್ಮನ್ನೊಡ್ಡಿಕೊಂಡಿದ್ದಾರೆ. ಚಿತ್ರದ ನಾಯಕಿ ಸ್ವಾತಿ ಈ ಮುನ್ನ ಜಯತೀರ್ಥರ ಬ್ಯೂಟಿಫುಲ್ ಮನಸುಗಳು ಚಿತ್ರದಲ್ಲಿನ ಪುಟ್ಟ ಪಾತ್ರವೊಂದರಲ್ಲಿ ನಟಿಸಿದ್ದಾರೆ. ವೆನಿಲ್ಲಾ ಅವರ ಪಾಲಿಗೆ ಬಡ್ತಿಯ ರೂಪದಲ್ಲಿ ಪರಿಣಮಿಸಿರುವ ಸಿನಿಮಾ.

ಚಿತ್ರದ ಟ್ರೈಲರ್ ಕಳೆದ ವಾರ ಮೈಸೂರಿನಲ್ಲಿ ಬಿಡುಗಡೆಯಾಗಿದೆ. ಟ್ರೈಲರ್ ಬಿಡುಗಡೆ ಮಾಡಿದ ದರ್ಶನ್, ಯುವಪ್ರತಿಭೆಗಳ ಚಿತ್ರಕ್ಕೆ ಶುಭ ಹಾರೈಸಿದರು.





## ಅಭಿಮಾನ ಧನ 'ಕನಕ'!

ಆರ್. ಚಂದ್ರು ನಿರ್ದೇಶನದ 'ಕನಕ' ಗಾಂಧೀನಗರದ ಕುತೂಹಲ ಕೆರಳಿಸಿರುವ ಚಿತ್ರಗಳಲ್ಲೊಂದು. ಚಂದ್ರು ನಿರ್ಮಾಣ, ನಿರ್ದೇಶನ ಎನ್ನುವ ವಿಶೇಷದ ಜೊತೆಗೆ, ದುನಿಯಾ ವಿಜಯ್ ನಟನೆ ಎನ್ನುವ ವರ್ಚಸ್ಸು ಕೂಡ ಚಿತ್ರಕ್ಕಿದೆ.

'ಮಾಸ್ತಿಗುಡಿ' ಸಿನಿಮಾ ನಿರೀಕ್ಷಿತ ಯಶಸ್ಸು ಕಾಣದ ಹಿನ್ನೆಲೆಯಲ್ಲಿ ವಿಜಯ್ ಅವರಿಗೆ 'ಕನಕ' ಚಿತ್ರದ ಬಗ್ಗೆ ಸಾಕಷ್ಟು ನಿರೀಕ್ಷೆಗಳಿವೆ. ಚಂದ್ರು ಅವರಿಗೆ ಕೂಡ ಈ ಸಿನಿಮಾ ಗೆಲ್ಲಲೇಬೇಕಾದ ಅನಿವಾರ್ಯತೆಯಿದೆ. ಸ್ವಂತ ನಿರ್ಮಾಣದ ಚಿತ್ರವನ್ನು ಅವರು ಸಾಕಷ್ಟು ಅದ್ದೂರಿಯಾಗಿ ರೂಪಿಸಿದ್ದಾರೆ. ಚಿತ್ರದ ಕಥೆಯನ್ನು ವಿಜಯ್ ವರ್ಚಸ್ಸಿಗೆ ಒಗ್ಗುವಂತೆ ರೂಪಿಸಿರುವುದರ ಜೊತೆಗೆ, ಕೌಟುಂಬಿಕ ಆಯಾಮವನ್ನೂ ಅವರು ಸೇರಿಸಿದ್ದಾರಂತೆ. ಈ ಮೂಲಕ ಎಲ್ಲ ವರ್ಗದ ಪ್ರೇಕ್ಷಕರನ್ನು ಮುಟ್ಟುವ ಉದ್ದೇಶ ಅವರದು.

ಚಂದ್ರು ಹೆಣೆದಿರುವ ಕಥೆ ಕುತೂಹಲಕರವಾಗಿದೆ. ಕಥಾನಾಯಕ ಕನಕ ವರನಟ ರಾಜಕುಮಾರ್ ಅಭಿಮಾನಿ. ಈ ಮೂಲಕ ರಾಜ್ ಪ್ರಭಾವಳಿಯೊಂದು ಚಿತ್ರದುದ್ದಕ್ಕೂ ಕೆಲಸ ಮಾಡಿದೆ. ಸಿನಿಮಾದ ಪ್ರಚಾರಕ್ಕೆ ಕೂಡ 'ರಾಜ್ ಅಭಿಮಾನ' ಬಳಕೆಯಾಗುತ್ತಿದೆ. ಚಿತ್ರಮಂದಿರಗಳ ಹೊರಗೆ ರಾಜ್ ಕಟೌಟ್ ಕಾಣಿಸಲಿದೆ.

ಕನಕನಿಗೆ ಜೋಡಿಯಾಗಿ ಕೆಂಡಸಂಪಿಗೆ ಚೆಲುವೆ ಮಾನ್ವಿತಾ ನಟಿಸಿದ್ದಾರೆ. ಅನುಭವಿ ತಂಡವೊಂದರ ಜೊತೆ ಕೆಲಸ ಮಾಡಿರುವ ಖುಷಿ ಅವರದು. ಫೆಬ್ರುವರಿಯಲ್ಲಿ 'ಕನಕ'ನನ್ನು ತೆರೆಕಾಣಿಸಲು ಚಂದ್ರು ಅಂತಿಮ ಕ್ಷಣಗಳ ಸಿದ್ಧತೆ ನಡೆಸಿದ್ದಾರೆ.